5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನುಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯಾಗಲಿ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯ್ತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ಜಮೀನು ಅಥವಾ ತೋಟದ ಹೆಸರು.	ಮುಸ್ತೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಎಕರೆ.	ಗುಂಟೆ.	ಅಂದಾಜಾ ಕಿಮ್ಮತ್ತು. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ಸೋಪಸ್ಸಾದ ಸಾಲ ಮತ್ತು ಇತರ ಸಹಿತ ಬಡ್ಡಿ ಮೊದಲಾದ. ರೂ.	ಆ.	ಪೈ.
1	2	3	4	5	6	7	8	9	10						11	
ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ.	ಸರ್ವೆನಂ ೨೨೨ ಜಾಜಾವರ.	ರಮ್ಯವೆರಾಚಾರ್ ಮೈನರ್, ಗಾರ್ಡಿಯರ್ ತಾಯಿ ವೆಂಕಟಲಕ್ಷ್ಮಮ್ಮ.	..	ರೂ. ಆ. ಪೈ.	ಸರ್ವೆನಂ ೨೨೨ ಜಾಜಾವರ ಗ್ರಾಮದಲ್ಲಿ ಬಾಕಿದಾರನಿಗೆ ಇರುವ ಒಣ ಬಾಧ್ಯತೆ	ಖುಷ್ಕೀ ತರೀ ಬಾಗಾಯತು ಪರಂಪೋಕು ಟೋಟಲ್ ಸಾಲಿಯಾನಾ ಸರ್ಕಾರಕ್ಕೆ ಬರಬೇಕಾದ್ದು ಕ್ವಿಟ್‌ರೆಂಟ್ ಸೆಸ್ಸು	392 101 25 208 727	6 7 16 39 28	347 235 119 3 704 88 44 12	0 1 0 4 5 0 2	0 0 0 0 0	1048 ಬಡ್ಡಿ 363 1412	11 13 8	0 4 4

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ಫಾರೆಸ್ಟ್ ಇಲಾಖೆ.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 16ನೇ ಮಾರ್ಚಿ 1896ನೇ ಇಸವಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಸರ್ಕಾರ ತರ್ಫಿನಿಂದ ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ, ಮದ್ದಗಿರಿ, ಕುದರೆಕಣಿವೆ, ಹುಲಿಯೂರದುರ್ಗ, ಬುಕ್ಕಾಪಟ್ಟಣ ಫಾರೆಸ್ಟ್‌ಗಳಲ್ಲಿ ಜವಾಬಿಸಲ್ಪಟ್ಟ 1895—96ನೇ ಸಾಲು ಪಸಾರೆ ಜಿನಿಸುಗಳು ವಗೈರೆ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುತ್ತೆ.

1896ನೇ ಇಸವಿ ಏಪ್ರಿಲ್ 14ರಲ್ಲು ಹುಲಿಯೂರದುರ್ಗದ ತಾಲ್ಲೂಕು ಕಚೇರಿಯಲ್ಲಿ.

ನಂಬರ್.	ಜಿನಸು ತಪಶೀಲ್.	ಪಲ್ಲ.	ಮಣ.	ಕೇರು.	ಷರಾ.
1	ಅಳಲೇಕಾಯಿ	..	229	..	ಸರಾಸರಿ
2	ಹೊಂಗೇಬೀಜ	1	..	..	ಡಿಟೋ
3	ಸೀಗೇಕಾಯಿ	..	20	..	ಡಿಟೋ
4	ಹುಣಸೇಹಂಣು	..	10	..	ಡಿಟೋ

1896ನೇ ಇಸವಿ ಏಪ್ರಿಲ್ 17ರಲ್ಲು ತುಮಕೂರ ಡಿಪೋದಲ್ಲಿ.

ನಂಬರ್.	ಜಿನಸು ತಪಶೀಲ್.	ಪಲ್ಲ.	ಮಣ.	ಕೇರು.	ಷರಾ.
1	ಅಳಲೇಕಾಯಿ	..	100	..	ಡಿಟೋ
2	ಗೇರುಬೀಜ (Marking nut)	1	..	..	ಡಿಟೋ
3	ಹೊಂಗೇಕಾಯಿ	10	..	..	ಡಿಟೋ
4	ಸೀಗೇಕಾಯಿ	..	85	..	ಡಿಟೋ
5	ಲಾಕ್ (ಅರಗು)	..	2	..	ಡಿಟೋ
6	ಹುಣಸೇ ಹಂಣು	..	100	..	ಡಿಟೋ
7	ಕಪಿಲಾರಂಗು	..	1	14	ಡಿಟೋ
8	ಕ್ಯಾಸು ಅರೀನತೀರು	ನಂಬರ್ 24	ಸಲೆ 51-3-3	..	ಡಿಟೋ

1896ನೇ ಇಸವಿ ಏಪ್ರಿಲ್ 20ರಲ್ಲು ಮದ್ದಗಿರಿ ಡಿಪೋದಲ್ಲಿ.

1	ಅಳಲೇಕಾಯಿ	..	700	..	ಡಿಟೋ
2	ಗೇರುಬೀಜ	3	..	..	ಡಿಟೋ
3	ಹೊಂಗೇಕಾಯಿ	..	..	50	ಡಿಟೋ
4	ಹುಣಸೇಹಂಣು	..	10	..	ಡಿಟೋ
5	ತ್ಯಾಗದ ತೀರು	ನಂಬರ್ 124	ಸಲೆ 118-11-3	..	ಡಿಟೋ
6	ಹುಲ್ವೇ	1	8	..	ಡಿಟೋ

1896ನೇ ಇಸವಿ ಏಪ್ರಿಲ್ 22ರಲ್ಲು ಕಿರಾ ಮುಸಾಫರ್ ಬಂಗ್ಲದಲ್ಲಿ.

1	ಅಳಲೇಕಾಯಿ	..	770	..	ಡಿಟೋ
2	ಹುಣಸೇಹಂಣು	..	6	..	ಡಿಟೋ
3	ಕುದರೆಕಣವೆ ಸ್ಟೇಟ್ ಫಾರೆಸ್ಟ್ ಬಾಬತು ಅಳಲೇಕಾಯಿ	..	67	..	ಡಿಟೋ

ಮೊಟಲಗು ಪಾವತಿ ಯಾ ಹರಾಜು ತಾರೀಖು ಲಾಗಾಯತು ಕಾವಲ್ ಕಟ್ಟಣೆ ಪರಾಜುದಾರ್ರಿಗೇನೇ ಸಂಬಂಧಪಡುತ್ತೆ.

ಷರತ್ತು.—ಕೇಕಡಾ 25 ರೂಪಾಯಿನಂತೆ ಡಿಪಾಜಿಟ್ ಮೊಬಲಗು ತಕ್ಷಣ ಕಟ್ಟಬೇಕು. ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ವಂದು ವಾರದೊಳಗಾಗಿ ಪಾವತಿ ಮಾಡಬೇಕು, ತಪ್ಪಿದರೆ ಬಾಬನ್ನ ಪುನಹ ಹರಾಜ್ ಮಾಡಲ್ಪಡುತ್ತೆ. ಲುಕ್‌ಸಾನಿಗೆ ಮೊದಲೆ ಪರಾಜುದಾರನ್ನ ಗುರಿಮಾಡುತ್ತೆ. ಸಾವಾನುಗಳು ಹರಾಜು ತಾರೀಖು ಲಾಗಾಯತು 10 ದಿವಸಗಳ ವಳಗಾಗಿ ಸಾಗಿಸುಕೊಳ್ಳಲ್ಪಡಬೇಕು. ಇವುಗಳ ಶಿವಾಯಿ ಇತರ ತಪಶೀಲ್‌ಗಳಿಗೆ 1887ನೇ ಇಸವಿ ಸೆಪ್ಟಂಬರ್ 3ನೇ ನುಮ್ಮಂ 35ನೇ ನಂಬರಿ ಗೆಜೆಟ್ಟಿನ 1ನೇ ಭಾಗದಲ್ಲಿ ಘಾಯಿಷಾಗಿರುವ 1887ನೇ ಇಸವಿ ಆಗಸ್ಟ್ 30ನೇ ನುಮ್ಮಂ 90ನೇ ನಂಬರ್ ಪ್ರಕಟನೆ ನೋಡಿ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಮೈಸೂರು ಫಾರೆಸ್ಟ್ ಇಲಾಖೆ.

ಇಸ್ತಿಹಾರ್‌ನಾಮೆ.

ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಜಂಗಲ್‌ಗಳಲ್ಲಿ ಬಿದರು, ಗಳುವನ್ನು ಕತರಾಯಿಸು ಜಮಾಯಿಸು ಖರೀದಿಗೆ ತೆಗದುಕೊಳ್ಳತಕ್ಕ ಬಗ್ಗೆ ದರಖಾಸ್ತುಗಳು ಕೋರಲ್ಪಟ್ಟಿವೆ.

(1)	ನಂದೀ ಫಾರೆಸ್ಟ್	ತಾಲ್ಲೂಕು ಚಿಕ್ಕಬಳ್ಳಾಪುರ.
(2)	ನರಸಿಂಹದೇವರ ಬೆಟ್ಟದ ಫಾರೆಸ್ಟಿನಲ್ಲಿ II ಎರಡನೇ ಬ್ಲಾಕ್	ಡಿಟೋ.
(3)	ರಾಯಲ್‌ಪಾಡಿ ಫಾರೆಸ್ಟಿನಲ್ಲಿ ಮುದಿಮಡಗು ಬ್ಲಾಕ್	ಚಿಂತಾಮಣಿ.
(4)	ನೂಟವೆ ಡಿಸ್ಟ್ರಿಕ್ಟ್ ಜಂಗಲ್	ಮಾಲೂರ.